# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 271(446)
2) ಸದಸ್ಯರ ಹೆಸರು : ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು)
3) ಉತ್ತರಿಸುವ ದಿನಾಂಕ : 12.12.2018.
4) ಉತ್ತರಿಸುವವರು : ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಅರಣ್ಯ ಪ್ರದೇಶದಲ್ಲಿ ಆನೆಗಳ ಹಾವಳಿಗಳನ್ನು ತಪ್ಪಿಸಲು ರೈಲುಪಟ್ಟಿ ಮಾದರಿ ಬೇಲಿಗಳನ್ನು ರಚಿಸಲು ಇಲಾಖೆ ಖರ್ಚು ಮಾಡಿದ ಮೊತ್ತ ಎಷ್ಟು; | ರಾಜ್ಯದಲ್ಲಿ ಆನೆಗಳ ಹಾವಳಿ ಹೆಚ್ಚಾಗಿರುವ ಪ್ರದೇಶಗಳಲ್ಲಿ ಕಾಡಾನೆಗಳ ಹಾವಳಿಯನ್ನು ತಡೆಗಟ್ಟಲು ಉಪಯೋಗಿತ ರೈಲು ಹಳಿಗಳನ್ನು ಉಪಯೋಗಿಸಿ ತಡೆ ಬೇಲಿಗಳನ್ನು ರಚಿಸಲಾಗುತ್ತಿದ್ದು, ಕಳೆದ ನಾಲ್ಕು ವರ್ಷಗಳಲ್ಲಿ 70.764 ಕಿ.ಮೀ. ರೈಲು ಹಳಿ ತಡೆ ಬೇಲಿಯನ್ನು ನಿರ್ಮಿಸಲಾಗಿದ್ದು. ಇದಕ್ಕಾಗಿ ರೂ.8,741.617 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. |
| ಆ) | 2015-16 ರಿಂದ 2017-18ರಲ್ಲಿ ಆನೆ ಹಾವಳಿಗಳಿಂದ ಮೃತಪಟ್ಟವರ ಸಂಖ್ಯೆ ಎಷ್ಟು; ಅವರಿಗೆ ನೀಡಿದ ಪರಿಹಾರ ಎಷ್ಟು; ಉಂಟಾದ ಬೆಳೆ ನಷ್ಟ ಎಷ್ಟು; ಬೆಳೆ ನಷ್ಟಕ್ಕೆ ಒದಗಿಸಿದ ಪರಿಹಾರ ಎಷ್ಟು; | 2015-16 ರಿಂದ 2017-18ರಲ್ಲಿ ಆನೆ ಮತ್ತು ವನ್ಯಪ್ರಾಣಿಗಳಿಂದ ಉಂಟಾದ ಹಾನಿ ಪ್ರಕರಣಗಳು ಮತ್ತು ಪಾವತಿಸಲಾದ ದಯಾತ್ಮಕ ಧನದ ವಿವರ ಕೆಳಕಂಡಂತಿದೆ:- |

(ರೂ.ಲಕ್ಷಗಳಲ್ಲಿ)

| ವಿವರಗಳು | 2015-16 | | 2016-17 | | 2017-18 | | 2018-19 (ಅಕ್ಟೋಬರ್-18ರ ಅಂತ್ಯಕ್ಕೆ) | |
|---|---|---|---|---|---|---|---|---|
| | ಪ್ರಕರಣ ಸಂಖ್ಯೆ | ಪಾವತಿಸಿದ ಮೊತ್ತ | ಪ್ರಕರಣ ಸಂಖ್ಯೆ | ಪಾವತಿಸಿದ ಮೊತ್ತ | ಪ್ರಕರಣ ಸಂಖ್ಯೆ | ಪಾವತಿಸಿದ ಮೊತ್ತ | ಪ್ರಕರಣ ಸಂಖ್ಯೆ | ಪಾವತಿಸಿದ ಮೊತ್ತ |
| ಬೆಳನಾಶ | 21150 | 708.99 | 18985 | 705.67 | 20,295 | 937.62 | 6595 | 347.23 |
| ಮಾನವ ಪ್ರಾಣ ಹಾನಿ | 47 | 228.00 | 49 | 235.00 | 42 | 178.81 | 16 | 80.00 |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಇ) | ಅರಣ್ಯ ಪ್ರದೇಶದಲ್ಲಿ ಆನೆಗಳನ್ನು ಪತ್ತೆ ಹಚ್ಚಲು ಇಲಾಖೆ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು) | ಅರಣ್ಯ ಪ್ರದೇಶಗಳಲ್ಲಿ ಕಾಡಾನೆಗಳ ಹೆಜ್ಜೆ ಗುರುತು, ಕಾಡಾನೆಗಳ ಲದ್ದಿಯಿಂದ ಮತ್ತು ಸಾಕಾನೆಗಳೊಂದಿಗೆ ಗಸ್ತು ತಿರುಗುವ ಮೂಲಕ ಆನೆಗಳನ್ನು ಪತ್ತೆ ಹಚ್ಚಲಾಗುವುದು. |
| ಈ) | ಕರ್ನಾಟಕ ರಾಜ್ಯದ ಅರಣ್ಯ ಪ್ರದೇಶದಲ್ಲಿರುವ ಒಟ್ಟು ಆನೆಗಳ ಸಂಖ್ಯೆ ಎಷ್ಟು; ನಿಖರವಾಗಿ ಗುರುತಿಸಲಾಗಿದೆಯೇ; (ವಿವರ ನೀಡುವುದು) | 2012ನೇ ಸಾಲಿನಲ್ಲಿ ಕೈಗೊಂಡ ಆನೆ ಸಮೀಕ್ಷೆ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಒಟ್ಟು 6072 ಆನೆಗಳಿರುತ್ತವೆ ಎಂದು ಅಂದಾಜಿಸಲಾಗಿದೆ. |

| | | |
|---|---|---|
| ಉ) | ಅರಣ್ಯ ಇಲಾಖೆಯಲ್ಲಿ ಕಳ್ಳಬೇಟೆ ನಿಯಂತ್ರಣ ಮಾಡಲು ಎಷ್ಟು ಶಿಬಿರಗಳನ್ನು ನೇಮಿಸಲಾಗಿದೆ; ಕಳೆದ 2 ವರ್ಷಗಳಲ್ಲಿ ಪತ್ತೆ ಹಚ್ಚಿದ ಪ್ರಕರಣಗಳೆಷ್ಟು? (ವಿವರ ನಿಡುವುದು) | ವನ್ಯಜೀವಿ ಘಟಕಕ್ಕೆ ಸಂಬಂಧಿಸಿದಂತೆ 420 ಕಳ್ಳಬೇಟೆ ತಡೆ ನಿಯಂತ್ರಣ ಶಿಬಿರಗಳನ್ನು ರಚಿಸಲಾಗಿರುತ್ತದೆ. ಕಳೆದ ಎರಡು ವರ್ಷಗಳಲ್ಲಿ 328 ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ. |

ಸಂಖ್ಯೆ: ಅಪಜೀ 175 ಎಫ್‌ಡಬ್ಲ್ಯೂಎಲ್ 2018

(ಆರ್. ಶಂಕರ್)
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು